ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 19-03-2021 ಪ್ರಶ್ನೆ ಸಂಖ್ಯೆ : 232 (1657)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 19-03-2021

ಉತ್ತರಿಸುವ ಸಚಿವರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

ವಿಷಯ : ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಕುರಿತು

(ಅ) ರಾಜ್ಯದಲ್ಲಿ ಜಲಜೀವನ್ ಮಿಷನ್ ಯೋಜನೆ ಜಾರಿಗೊಳಿಸಲು ಮೀಸಲಿಟ್ಟ ಅನುದಾನವೆಷ್ಟು; ಎಷ್ಟು ಹಂತಗಳಲ್ಲಿ ಕಾರ್ಯಗತಗೊಳಿಸಲಾಗುವುದು;

(ಆ) ಯೋಜನೆಯ ಪ್ರಮುಖ ಉದ್ದೇಶಗಳ ಕಾರ್ಯಕ್ಕೆ ದರ ನಿಗಧಿಪಡಿಸುವವರು ಯಾರು; ಇದರ ನಿರ್ವಹಣೆ ಯಾರು ಮಾಡಬೇಕೆಂಬುದು ಸರ್ಕಾರದ ಮಾರ್ಗಸೂಚಿಯಲ್ಲಿದೆಯೇ; ಹೌದಾದಲ್ಲಿ ವಿವರ ಒದಗಿಸುವುದು; ಇಲ್ಲದಿದ್ದಲ್ಲಿ, ಭ್ರಷ್ಟಾಚಾರ ನಡೆಯುವ ಸಾಧ್ಯತೆ ಇರುವುದರಿಂದ ಸರ್ಕಾರದ ಸ್ಪಷ್ಟನೆಯೇನು;

(ಇ) ಯೋಜನೆ ಅನುಷ್ಠಾನವನ್ನು ಟೆಂಡರ್ ಮೂಲಕ ಕೈಗೊಳ್ಳಲಾಗುವುದೇ; ಹೌದಾದಲ್ಲಿ ಗ್ಲೋಬಲ್ ಟೆಂಡರ್ ಕರೆಯಲಾಗುವುದೇ ಅಥವಾ ರಾಷ್ಟ್ರೀಯ ಟೆಂಡರ್ ಕರೆಯಲಾಗುವುದೇ ತಿಳಿಸುವುದು;

(ಈ) ಯೋಜನೆ ಪೂರ್ಣಗೊಳಿಸಲು ಸರ್ಕಾರವು ಯಾವುದಾದರೂ ಕಾಲಮಿತಿ ಇದೆಯೇ; ಹೌದಾದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು; ಇಲ್ಲದಿದ್ದಲ್ಲಿ, ಕಾರಣವೇನು?